ಶ್ರೀ ಎನ್. ಎ. ಚನ್ನೇಗೌಡ.—ಸ್ವಾಮಿ, ನನ್ನ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಪರಿಶಿಷ್ಟ ದಲ್ಲಿ ಕೊಟ್ಟಿದ್ದೀರಿ ತಮಿಳು ಸ್ಕೂಲಿನಲ್ಲಿ 112 ಜನ ವಿದ್ಯಾರ್ಥಿಗಳು ಇದ್ದಾರೆ, ಆ ಸ್ಕೂಲಿನ ವಿಸ್ತೀರ್ಣ 240 ಚದುರ ಅಡಿ ಇದೆ ಎಂದು ಹೇಳಿದ್ದೀರಿ, ಅದು ಬ್ಲ್ಯಾಕ್ ಹೋಲ್ ಆಫ್ ಕಲ್ಕತ್ತಾಕ್ಕಿಂತ ಉತ್ತಮ ವಾಗಿದೆಯೇ ಒಂದು ರೂಮಿನಲ್ಲಿ ನಾಲ್ಕು ತರಗತಿಗಳನ್ನು ನಡೆಸುತ್ತಿದ್ದಾರೆ, ಆ ರೀತಿ ಒಂದು ರೂಮಿನಲ್ಲಿ ನಾಲ್ಕು ತರಗತಿಗಳನ್ನು ನಡೆಸುವುದಕ್ಕೆ ಸಾಧ್ಯವಿದೆಯೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದಕ್ಕೆ ಅಲ್ಲಿಯ ಮುನಿಸಿಪಾಲಿಟಿಯವರಿಂದ ಆಕಾಮಡೇಷನ್ ಒದಗಿಸಿಕೊಡುವುದಕ್ಕೆ ಪ್ರಯತ್ನ ನಡೆಯುತ್ತಿದೆ.

ಶ್ರೀ ಎನ್. ಎ. ಚನ್ನೇಗೌಡ.—ಆ ಮುನಿಸಿಪಾಲಿಟಿಯಲ್ಲಿ ಬಹಳವಾದ ಹಣದ ಕೊರತೆ ಇರುವುದರಿಂದ ಸರ್ಕಾರದವರು ಹೌಸಿಂಗ್ ಬೋರ್ಡ್ ಮುಖಾಂತರ ಅದಕ್ಕೆ ಕಟ್ಟಡವನ್ನು ಕಟ್ಟಿಸಿಕೊಟ್ಟು ಆ ಹಣವನ್ನು ಮುನಿಸಿಪಾಲಿಟಿಯಿಂದ ಕಂತುಗಳ ಮೂಲಕ ವಸೂಲು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಗಣಿಸ ರಾಗುತ್ತದೆ.

ಶ್ರೀ ಎಂ. ಎನ್. ಕೃಷ್ಣನ್.—ಅನೇಕ ಕಡೆಗಳಲ್ಲಿ ತಮಿಳು ಉಪಾಧ್ಯಾಯರು ಇಲ್ಲದೆ, ಎಷ್ಟು ಕೇಳಿದರೂ ತಮಿಳು ಉಪಾಧ್ಯಾಯರನ್ನು ಕೊಡದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಿರ್ದಿಷ್ಟವಾದ ಉದಾಹರಣೆಗಳನ್ನು ಸರ್ಕಾರದ ಗಮನಕ್ಕೆ ತಂದರೆ ತಕ್ಷಣ ಶಿಕ್ಷರನ್ನು ನೇಮಿಸುವ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎನ್. ಎ. ಚನ್ನೇಗೌಡ.—ಆ ಸ್ಕೂಲುಗಳಲ್ಲಿ 38 ಜನ ಗಂಡನರು ಉಪಾಧ್ಯಾಯರು ಇದ್ದಾರೆ, 18 ಜನ ಹೆಂಗನರು ಉಪಾಧ್ಯಾಯರು ಇದ್ದಾರೆ ಎಂದು ಹೇಳಿದ್ದೀರಿ, ಪ್ರೈಮರಿ ಸ್ಕೂಲುಗಳಿಗೆ ಆದಷ್ಟು ಮಟ್ಟಿಗೆ ಸ್ತ್ರೀಯರನ್ನೇ ನೇಮಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರ ಸಲಹೆ ಯೋಗ್ಯ ಸಲಹೆ ಇದೆ. ಆದರೆ ಎಲ್ಲಾ ಮಹಿಳಾ ಶಿಕ್ಷಕರನ್ನೇ ನೇಮಿಸುವುದಾದರೆ ಆದಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. ಇದರಲ್ಲಿ ಮೊದಲನೆಯದಾಗಿ ಮಹಿಳಾ ಶಿಕ್ಷಕರು ಸಾಕಷ್ಟು ಸಂಖ್ಯೆಯಲ್ಲಿ ಸಿಕ್ಕುತ್ತಾ ಇಲ್ಲ. ಅವರು ಸಿಕ್ಕಿದಂತೆಲ್ಲಾ ಹೆಚ್ಚಿಗೆ ಮಹಿಳಾ ಶಿಕ್ಷಕರನ್ನು ನೇಮಕ ಮಾಡುವುದಕ್ಕೆ ಸಾಧ್ಯವಿದೆ.

Coconut Trees in Kodur Village

64. Sri I. SOMASEKHARAPPA (Hosanagar).—

Will the Minister for Agriculture be pleased to state :—

(*a*) whether it has come to the notice of the Government that innumerable coconut trees are dying in the Hosanagar Taluk and particularly in Kodur village ;

(*b*) if so, the reason for the same ;

(*c*) whether the department has taken any steps to prevent the same ?

Sri B. RACHAIAH (Minister for Agriculture).—

(*a*) Yes.

(*b*) Due to Bud-Rot disease.

(*c*) Yes. The technical staff of the Horticulture Department have approached the Coconut cultivators and advised them to take up plant protection measures against the Bud-Rot disease.

ಶ್ರೀ ಐ. ಶೋಮಶೇಖರಪ್ಪ.—ಸ್ಪೀಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಕುಡಿ ಕೊಳೆಯುವ ರೋಗದ ಕಾರಣದಿಂದಾಗಿ ತೆಂಗಿನ ಮರಗಳು ಒಣಗಿ ಹೋಗುತ್ತಿವೆ ಎಂದು ಹೇಳಿದ್ದೀರಿ, ಹಾಗಾದರೆ ಆ ತೆಂಗಿನ ಮರಗಳನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ಆ ರೋಗವನ್ನು ತಡೆಗಟ್ಟಲು ಯಾವ ಯಾವ ಔಷಧಿಯನ್ನು ಉಪಯೋಗಿಸಬೇಕು ಎಂಬುದನ್ನು ಹೇಳುತ್ತೀರಾ ?

† ಶ್ರೀ ಬಿ. ರಾಚಯ್ಯ.—ಈಗ ಯಾವ ಗಿಡಗಳಿಗೆ ರೋಗ ತಗುಲಿದೆಯೋ ಆ ಗಿಡವನ್ನು ಬೇರು ಸಹಿತ ಕಿತ್ತು ಹಾಕಿ ಅದನ್ನು ಸುಟ್ಟು ಹಾಕಿದರೆ, ಮಿಕ್ಕ ಗಿಡಗಳಿಗೆ ಆ ರೋಗ ಹಬ್ಬುವುದಿಲ್ಲ ಎಂದು ತಜ್ಞರು ಸಲಹೆ ಮಾಡಿದ್ದಾರೆ. ಅದು ಸಣ್ಣ ಪ್ರಮಾಣದಲ್ಲಿ ಬಂದಾಗ ಅರ್ಲಿಯರ್ ಸ್ಪ್ರೇಜನಲ್ಲೇ ಆಡಕ್ಕೆ copper sulphate ಮಿಕ್ಸ್‌ಚರ್ ಹಾಕಿದರೆ ಆ ರೋಗ ಹೋಗುತ್ತದೆ ಎಂದು ತಿಳಿದುಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ತಜ್ಞರು ಬೇರು ಸಹಿತ ಎಲ್ಲಾ ಗಿಡಗಳನ್ನು ಕಿತ್ತು ಹಾಕ ಬೇಕೆಂದು ಸಲಹೆ ಮಾಡಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—ತೋಟದಲ್ಲಿ ಕೆಲವು ಗಿಡಗಳಿಗೆ ರೋಗ ಬಂದರೆ, ತಕ್ಷಣ ಅವುಗಳನ್ನು ತೆಗೆದುಹಾಕಬೇಕು, ಇಲ್ಲದಿದ್ದರೆ, ಇನ್ನೂ ಅವು ಹರಡುವುದಕ್ಕೆ ಅವಕಾಶವಾಗುತ್ತದೆ ಎಂದು ಸಲಹೆ ಮಾಡಿದ್ದಾರೆ.

ಶ್ರೀ ಎನ್. ಎ. ಚನ್ನೇಗೌಡ.—ಈ ರೀತಿ ತೆಂಗಿನ ಮರಗಳಿಗೆ ಬರತಕ್ಕ ರೋಗಗಳಿಗೆ ಅವು ಬರದಂತೆ ಮುನ್ನೆಚ್ಚರಿಕೆಯ ಯಾವ್ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಜ್ಞರು ಸಲಹೆ ಮಾಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ತೆಂಗಿನ ಗಿಡಗಳಿಗೆ ಬರತಕ್ಕ ರೋಗಗಳನ್ನು ತಡೆಗಟ್ಟಲು ಯಾವ್ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಜ್ಞರು ಆಯಾಯ ಭಾಗಗಳಿಗೆ ಹೋಗಿ ರೈತರಿಗೆ ತಿಳುವಳಿಕೆ ಯನ್ನು ಕೊಡುತ್ತಿದ್ದಾರೆ. ಇವರು ಕೇಳರತಕ್ಕ ಭಾಗದಲ್ಲಿ ತಿಳುವಳಿಕೆ ಕೊಟ್ಟಿದ್ದಾರೆ. ಅದರ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎಂ.ಎನ್. ರಾಮಣ್ಣ.—ಈ ತೆಂಗಿನ ಗಿಡಗಳಿಗೆ ಹಾನಿಯಾಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದರೆ ತೋಟಗಾರಿಕೆಯ ಇರಾಖೆಯವರು ಸರ್ವೆ ನಡೆಸಿ, ಎಷ್ಟು ಎಕರೆಗಳಲ್ಲಿ ಬಂದಿದೆ ಎಂದು ನೋಡಿ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಲು ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ಆ ಭಾಗದಲ್ಲಿ ಸುಮಾರು 75 ಎಕರೆಗಳಲ್ಲಿ ಸುಮಾರು 1,445 ಗಿಡಗಳಿಗೆ ಮಾತ್ರ ರೋಗ ತಗಲಿದೆ. ಅದರ ಪ್ರಕಾರ ಇವರು ಕಾರ್ಯಕ್ರಮ ತೆಗೆದುಕೊಂಡು ರೋಗ ಹರಡ ದಂತೆ ನೋಡಿಕೊಂಡಿದ್ದಾರೆ.

ಶ್ರೀ ಎಂ. ಎನ್. ರಾಮಣ್ಣ.—ತೆಂಗು ಬೆಳೆಯುವ ಎಲ್ಲಾ ಪ್ರದೇಶಗಳಲ್ಲೂ ರೋಗ ಇದೆ. ಇದರಿಂದ ತಿಪಟೂರಿನಲ್ಲಿ ಗಂಗಾಪಾನಿ ಎಳನೀರು ಎಂಬ ಪ್ರಸಿದ್ಧ ಜಾತಿಯ ಒಂದು ಗಿಡವೂ ಉಳಿಯುವುದಕ್ಕೆ ಸಾಧ್ಯವಿಲ್ಲವಾಗಿದೆ. ಇದಕ್ಕೆ ನಿಮ್ಮ ಇರಾಖೆಯವರು ಏನು ಕಾರ್ಯಕ್ರಮ ತೆಗೆದು ಕೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಈಗಾಗಲೇ ಅದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ತೆಗೆದು ಕೊಂಡಿಲ್ಲದಿದ್ದರೆ, ಮುತ್ತ ಅಲ್ಲಿಗೆ ಹೋಗಿ ನೋಡಲು ಸಂಬಂಧಪಟ್ಟವರಿಗೆ ಆದೇಶ ಕೊಡುತ್ತೇವೆ.

Mr. SPEAKER.—Question No. 105 and 112 may be taken up together.

Allotment of Mechanised Boats

105. Sri RATNAKUMAR KATTEMAR (Mudabidri).—

Will the Minister of State for Fisheries and Ports be pleased to state:—

(*a*) whether a representation by Member, Legislative Assembly has been addressed to the Director of Fisheries with regard to the allotment of mechanised boats to the applicants mentioned therein;